(ಇ) ಹೊಸದಾಗಿ ಯೋಜನೆಯಡಿ ಗೃಹ ಸಂಪರ್ಕ ಮತ್ತು ಅಗೆದ ರಸ್ತೆಯ ದುರಸ್ಥಿ ಕಾಮಗಾರಿಗಳನ್ನು ಕೈಗೊಳ್ಳಲು ಪ್ರತ್ಯೇಕವಾದ ಅಂದಾಜನ್ನು ಮಂಡಳಿಯು ತಯಾರಿಸಿದ್ದು, ಪ್ರಸ್ತಾವನೆ ಪಡೆದು ಪರಿಶೀಲಿಸಿ ಅನುಮೋದನೆ ನೀಡಲಾಗುವುದು.

ರಾಷ್ಟ್ರೀಯ ಹೆದ್ದಾರಿಗಳು

882 (408); ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗಾ)

(ಅ) ರಾಜ್ಯದಲ್ಲಿ ಎಷ್ಟು ರಾಷ್ಟ್ರೀಯ ಹೆದ್ದಾರಿಗಳಿವೆ; ಅವುಗಳ ಸಂಪೂರ್ಣ ವಿವರ ನೀಡುವುದು; (ಕಿ. ಮೀ. ಯಾವ ಪ್ರದೇಶದಿಂದ ಯಾವ ಪ್ರದೇಶದವರೆಗೆ, ಹೆದ್ದಾರಿ ಹೆಸರು, ಮಂಜೂರಾದ ವಿವರ ಮತ್ತು ಸಂಖ್ಯೆ ಇತ್ಯಾದಿ)

(ಆ) ಕೇಂದ್ರ ಸರ್ಕಾರವು ರಾಷ್ಟ್ರೀಯ ಹೆದ್ದಾರಿಗಳ ನಿರ್ವಹಣೆ ಮತ್ತು ಸುಧಾರಣೆಗೆ ಎಷ್ಟು ಹಣವನ್ನು 2013–14ರಲ್ಲಿ ನೀಡಿದೆ; 2014–15ರಲ್ಲಿ ಎಷ್ಟು ಹಣ ಕೊಡಲಿದೆ?

ಡಾ. ಹೆಚ್. ಸಿ. ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು)

(ಅ) ರಾಜ್ಯದಲ್ಲಿ ಒಟ್ಟು 24 ರಾಷ್ಟ್ರೀಯ ಹೆದ್ದಾರಿಗಳು ಹಾದು ಹೋಗುತ್ತಿದ್ದು, ಅವುಗಳ ಒಟ್ಟು ಉದ್ದ 6326 ಕಿಮೀ. ಅವುಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

(ಆ) ರಾಷ್ಟ್ರೀಯ ಹೆದ್ದಾರಿ ವಲಯದ ವ್ಯಾಪ್ತಿಯಲ್ಲಿ ಬರುವ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ನಿರ್ವಹಣೆಗಾಗಿ ಒದಗಿಸಲಾದ ಅನುದಾನದ ವಿವರ ಗಳು ಈ ಕೆಳಕಂಡಂತಿವೆ:

ಕ್ರ. ಸಂ.	ವರ್ಷ	ಒದಗಿಸಲಾದ ಅನುದಾನ ರೂ. ಕೋಟಿಗಳಲ್ಲಿ	
		ಅಭಿವೃದ್ಧಿ	ನಿರ್ವಹಣೆ
1	2013–14	244.61	70.03
2	2014–15	29.00	24.93
	ಒಟ್ಟು	**273.61**	**94.96**

ಅನುಬಂಧ

ಕರ್ನಾಟಕ ರಾಜ್ಯದಲ್ಲಿ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿಗಳ ವಿವರ

ಕ್ರ. ಸಂ.	ರಾ. ಹೆ. ಸಂ.	ರಸ್ತೆಯ ವಿವರ	ರಸ್ತೆ ಉದ್ದ	ಮಂಜೂರಾದ ದಿನಾಂಕ
1	2	3	4	5
1	4	ಚೆನ್ನೈ–ಬೆಂಗಳೂರು–ಪೂನಾ ರಸ್ತೆ	699.59	ಸೆಪ್ಟೆಂಬರ್ 1956
2	4ಎ	ಬೆಳಗಾಂ–ಪಣಜಿ ರಸ್ತೆ	84.12	ಜುಲೈ 1971
3	7	ಹೈದ್ರಾಬಾದ್–ಬೆಂಗಳೂರು–ಹೊಸೂರು ರಸ್ತೆ	134.01	ಸೆಪ್ಟೆಂಬರ್ 1956
4	9	ಪೂನಾ–ಹೈದ್ರಾಬಾದ್ ರಸ್ತೆ	75.01	ಸೆಪ್ಟೆಂಬರ್ 1956
5	13	ಸೋಲಾಪುರ–ಮಂಗಳೂರು ರಸ್ತೆ	714.66	ಮೇ 1990 ಮತ್ತು ಜನವರಿ 1999
6	17	ಪಣಜಿ–ಮಂಗಳೂರು ರಸ್ತೆ	300.10	ಮಾರ್ಚ್ 1972
7	48	ಬೆಂಗಳೂರು–ಮಂಗಳೂರು ರಸ್ತೆ	319.50	ಮೇ 1972

8	50	ಕರ್ನಾಟಕ–ಮಹಾರಾಷ್ಟ್ರ ಗಡಿ(ನಾಂದೇಡ್)–ಲಕ್ಷ್ಮೀಸಾಗರ	260.81	28.05.2014
9	63	ಅಂಕೋಲಾ–ಗೂಟಿ ರಸ್ತೆ	368.60	ಫೆಬ್ರವರಿ 1998
10	67	ಮೆಟ್ಟುಪಾಳ್ಯಂ–ಗುಂಡ್ಲುಪೇಟೆ ರಸ್ತೆ	26.10	ಫೆಬ್ರವರಿ 2004
11	150	ಗುಲ್ಬರ್ಗಾ–ಯಾದಗಿರಿ–ಜಡ್‌ಚೆರ್ಲಾ	125.30	22.03.2013
12	150ಎ	ಜೇವರ್ಗಿ–ಚಾಮರಾಜನಗರ ರಸ್ತೆ	618.62	28.05.2014
13	150ಇ	ಗುಲ್ಬರ್ಗಾ–ಅಕಲಕೋಟೆ ರಸ್ತೆ	74.00	28.05.2014
14	167	ಹಗರಿ–ಕರ್ನಾಟಕ ಗಡಿ	74.00	23.03.2013
15	169ಎ	ತೀರ್ಥಹಳ್ಳಿ–ಉಡುಪಿ ರಸ್ತೆ	87.60	28.05.2014
16	173	ಮೂಡಿಗೆರೆ–ಕಡೂರು ರಸ್ತೆ	72.10	28.05.2014
17	206	ತುಮಕೂರು–ಹೊನ್ನಾವರ	370.63	ಜನವರಿ 1999
18	207	ಹೊಸೂರು–ದೇವನಹಳ್ಳಿ–ದಾಬಸ್‌ಪೇಟೆ	121.30	ಜನವರಿ 1999
19	209	ದಿಂಡಿಗಲ್–ಬೆಂಗಳೂರು	203.52	ಜನವರಿ 1999
20	212	ಕೋಜಿಗೊಡ್–ಕೊಳ್ಳೇಗಾಲ ರಸ್ತೆ	151.00	ಜುಲೈ 1999
21	218	ಹುಬ್ಬಳ್ಳಿ–ಬಿಜಾಪುರ–ಜೇವರ್ಗಿ–ಹುಮ್ನಾಬಾದ್	412.00	ಅಕ್ಟೋಬರ್ 2000 ಮತ್ತು ಜನವರಿ 2004
22	275	ಬಂಟ್ವಾಳ–ಬೆಂಗಳೂರು	3673.46	28.05.2014
23	234	ಮಂಗಳೂರು–ತಿರುವಣಾಮಲೈ	509.50	28.05.2014

24	367	ಬಾನಾಪುರ–ಗದ್ದನಕೇರಿ ರಸ್ತೆ	156.62	28.05.2014
		ಒಟ್ಟು	**6326.15**	

ಪಟ್ಟಣ ಪಂಚಾಯಿತಿಗಳನ್ನಾಗಿ ಮೇಲ್ದರ್ಜೆಗೇರಿಸುವುದು:

883 (918);ಶ್ರೀ ಭೀಮಾ ನಾಯ್ಕ ಎಸ್. (ಹಗರಿಬೊಮ್ಮನಹಳ್ಳಿ)

(ಅ) ಹಗರಿಬೊಮ್ಮನಹಳ್ಳಿ ತಾಲ್ಲೂಕು ಕೇಂದ್ರವಾಗಿದ್ದು, ಹಾಲಿ ಇರುವ ಗ್ರಾಮ ಪಂಚಾಯಿತಿಯನ್ನು 2011ರ ಜನಗಣತಿಯ ಪ್ರಕಾರ ಪಟ್ಟಣ ಪಂಚಾಯಿತಿ/ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

(ಆ) ಹೊಸಪೇಟೆ ತಾಲ್ಲೂಕು ಹಗರಿಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಮರಿಯಮ್ಮನಹಳ್ಳಿ ಗ್ರಾಮ ಪಂಚಾಯಿತಿಯನ್ನು 2011ರ ಜನಗಣತಿಯ ಪ್ರಕಾರ ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

(ಇ) ಹಾಗಿದ್ದಲ್ಲಿ, ಯಾವಾಗ ಈ ಮೇಲಿನ ಎರಡು ಗ್ರಾಮ ಪಂಚಾಯಿತಿಗಳನ್ನು ಮೇಲ್ದರ್ಜೆಗೇರಿಸಲಾಗುವುದು; ವಿವರಗಳನ್ನು ನೀಡುವುದು?

ಡಾ: ಖಮರುಲ್ ಇಸ್ಲಾಂ (ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು)

(ಅ) 2011ರ ಜನಗಣತಿಯನ್ವಯ ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿ ಗ್ರಾಮದ ಜನಸಂಖ್ಯೆಯ 8998 ಇರುತ್ತದೆ . . . . . 10000ಕ್ಕಿಂತ . . . . . ಕಡಿಮೆ ಜನಸಂಖ್ಯೆಯನ್ನು ಹೊಂದಿರುವುದರಿಂದ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

(ಆ) 2011ರ ಜನಗಣತಿಯನ್ವಯ ಮರಿಯಮ್ಮನಹಳ್ಳಿ ಗ್ರಾಮಕ್ಕೆ ಪಟ್ಟಣ ಪಂಚಾಯಿತಿಯನ್ನು ಸ್ಥಾಪಿಸುವ ಬಗ್ಗೆ ಕರ್ನಾಟಕ ಪೌರಸಭೆಗಳ ಕಾಯ್ದೆ